



### ಚೋಕರ್ ವೈವಿಧ್ಯ

ಮಕ್ಕಳಿಗಾಗಿಯೇ ಬಂದಿರುವ 'ಚೋಕರ್' ವೈವಿಧ್ಯಮಯ ವಿನ್ಯಾಸಗಳಲ್ಲಿ ಲಭ್ಯ. ಇದರಲ್ಲಿ ಮುಖ್ಯವಾಗಿ 'ಕಾಮನಬಿಲ್ಲು ವಿನ್ಯಾಸದ ಚೋಕರ್ ಹೆಚ್ಚು ಬೇಡಿಕೆ ಗಳಿಸುತ್ತಿದೆ. ಚಿನ್ನದಲ್ಲಿ ಮಾಡಿದ ಚೋಕರ್‌ಗಿಂತಲೂ ಎನಾಮಲ್ ಪೈಂಟ್ ಬಳಸಿದ ವಿನ್ಯಾಸ, ಕಪ್ಪು ಹರಳು ಅಥವಾ ಮಣಿಗಳನ್ನು ಜೋಡಿಸಿದ ಚೋಕರ್, ಎಮರಾಲ್ಡ್ ರೂಬಿ ಅಳವಡಿಸಿದ ಚೋಕರ್, ಕ್ಯುಬಿಕ್ ಜರ್ಕೋನಿಯಾ ಹೊಂದಿದ ಚೋಕರ್ ಹೆಚ್ಚು ಜನಪ್ರಿಯ.

ಇವೆಲ್ಲದರ ಜೊತೆಗೆ ಜಲಪ್ಪರಿ, ಗ್ಲೇಜರ್ ಚೋಕರ್‌ಗಳೂ ಹೆಣ್ಣುಮಕ್ಕಳ ಹೃದಯ ಗೆದ್ದಿವೆ. ಅದ್ದೂರಿ ಸಮಾರಂಭಗಳಿಗೆ ಈ ಮಾದರಿಯ ಚೋಕರ್‌ಗಳು ಹೇಳಿಮಾಡಿಸಿದಂಥವು.

ಎಮರಾಲ್ಡ್, ರೂಬಿ, ನೀಲ ಮುಂತಾದ ಹರಳುಗಳನ್ನು ಹೊಂದಿರುವ ಚೋಕರ್ ಸಖತ್ ಲುಕ್ ಕೊಡುತ್ತದೆ. ಚೋಕರ್ ಆಭರಣದ ಹರಳಿನ ಬಣ್ಣ ಉಡುಪಿನ ಬಣ್ಣದೊಂದಿಗೆ ಬೆರೆಯುವಂತಿರಲಿ ಅಥವಾ ಒಂದೇ ಆಗಿರಲಿ. ಹರಳುಗಳು ಇದ್ದ ಚೋಕರ್‌ಗಳು ಸಾಮಾನ್ಯವಾಗಿ ಭಾರವಾಗಿರುತ್ತದೆ. ಮುತ್ತು, ಹವಳ, ಜೇಡ್ ಯಾವುದಾದರೂ ಸರಿ, ಎಳೆ ಎಳೆಯಾಗಿ ಜೋಡಿಸಿದ್ದು ಮಧ್ಯದಲ್ಲಿ ಸಾಮಾನ್ಯವಾಗಿ ಒಂದು ಪೆಂಡೆಂಟ್ ಇರುತ್ತದೆ. ಇದನ್ನು ಕುತ್ತಿಗೆಯ ಮಧ್ಯ ಭಾಗದಲ್ಲಿ ಭದ್ರವಾಗಿ ಟೈಟ್ ಆಗಿ ನಿಲ್ಲುವಂತೆ ಧರಿಸಲಾಗುತ್ತದೆ. ಮಕ್ಕಳು ಚೂಡಿದಾರ ಹಾಕಿದ್ದರೆ ಇದು ಹೆಚ್ಚು ಶೋಭಿಸುತ್ತದೆ. ಹೊಳೆಯುವ ಚೋಕರ್, ಆ್ಯಂಟಿಕ್ ಚೋಕರ್, ಮುತ್ತಿನ ಚೋಕರ್ ಬಹಳ ಅಂದವಾಗಿ ಒಪ್ಪುತ್ತದೆ. ಬಹಳ ಮಾರ್ಡನ್ ಲುಕ್ ಕೊಡಲು ಇವೆಲ್ಲವೂ ಸಹಕಾರಿ.

### ಮಹಿಳೆಯರಿಗೂ ಸೂಕ್ತ

ಅಜ್ಜಿಯರ ಕಾಲದಲ್ಲಿ ಮನೆಮನೆಗಳ ಹೆಣ್ಣುಮಕ್ಕಳ ಕೊರಳುಗಳಲ್ಲಿ ಶೋಭಿಸುತ್ತಿದ್ದ ಚೋಕರ್ ಕೆಲಕಾಲ ತೆರೆಮರೆಗೆ ಸರಿದಿತ್ತು. ಈಗ ಮತ್ತೆ ಮುನ್ನೆಲೆಗೆ ಬಂದ ಚೋಕರ್‌ಗಳು ಮಹಿಳೆಯರಿಗೂ ಸೂಕ್ತವಾದಂತಹವು. ಮದುವೆಯಂತಹ ಶುಭ ಸಮಾರಂಭಕ್ಕೆ ಮಾತ್ರ. ಚಿನ್ನದಿಂದಲೇ ತಯಾರಿಸಿ ಒಳಗೆ ಟೊಳ್ಳಾಗಿರುವ ಭಾಗಕ್ಕೆ ಅರಗನ್ನು ತುಂಬಿ ಮಾಡಿದ ಚೋಕರ್‌ಗಳು ಸಖತ್ ಲುಕ್ ಕೊಡುತ್ತವೆ. ಈಗೀಗ ಮದುಮಗಳು, ಸಿನಿಮಾ ತಾರೆಯರು, ಮಾಡೆಲ್‌ಗಳು ಕೂಡ ಚೋಕರ್ ಅನ್ನೇ ಇಷ್ಟಪಟ್ಟು ಧರಿಸುತ್ತಿದ್ದಾರೆ. ಕುತ್ತಿಗೆಯ ಸುತ್ತ ಬಿಗಿಯಾಗಿ ಸುತ್ತಿಕೊಳ್ಳುವ ಈ ಆಭರಣದ ಹಿಂಭಾಗವನ್ನು ದಾರದಿಂದ ಸುತ್ತಿ ಬಳಸುವುದೂ ಪದ್ಧತಿ.

ಮಹಿಳೆಯರು ಅವರವರ ದೇಹ ಪ್ರಕೃತಿಗೆ ಅನುಗುಣವಾಗಿ ಚೋಕರ್‌ಗಳನ್ನು ಆಯ್ಕೆ ಮಾಡಿಕೊಳ್ಳಬಹುದು. ಕತ್ತು ಉದ್ದ ಇದ್ದರೆ ಅಂಥವರಿಗೆ ಮುತ್ತು ರತ್ನಗಳಿಂದ ಕೂಡಿದ ಚೋಕರ್ ಚೆನ್ನಾಗಿ ಕಾಣುತ್ತದೆ. ಸಣ್ಣಗೆ ಇರುವವರೂ ಕೊಂಚ ಅಗಲವಾದ ಚೋಕರ್ ಆಯ್ದುಕೊಳ್ಳಬಹುದು. ದಪ್ಪ ಇರುವವರು ಸಪೂರವಾಗಿರುವ ಚೋಕರ್ ಧರಿಸಿದರೆ ಚೆನ್ನಾಗಿರುತ್ತದೆ. ಮುಖ ಅಗಲ ಇರುವ ಮಹಿಳೆಯರು ಯಾವುದೇ ರೀತಿಯ ಚೋಕರ್‌ಗಳನ್ನೂ ಆಯ್ದುಕೊಳ್ಳಬಹುದು.

ಚೋಕರ್‌ಗಳಲ್ಲಿ ಹಲವು ವೈವಿಧ್ಯಗಳಿವೆ. ಹೀಗಾಗಿ ರೇಷ್ಮೆ ಸೀರೆ ಉಟ್ಟರೆ ಸೀರೆಯ ಬಣ್ಣಕ್ಕೆ ಒಪ್ಪುವ ಚೋಕರ್ ಆಯ್ದುಕೊಂಡು ಮ್ಯಾಚ್ ಮಾಡಿಕೊಳ್ಳಬಹುದು. ಪ್ಲಾಸ್ಟಿಕ್, ಫೈಬರ್, ವನ್ ಗ್ರಾಂ ಗೋಲ್ಡ್ ಜ್ಯುವೆಲ್ಲರಿಗಳಲ್ಲೂ ಹತ್ತು ಹಲವು ವಿನ್ಯಾಸಗಳ ಚೋಕರ್‌ಗಳು ಲಭ್ಯ. ಇವುಗಳು ಮಿಕ್ಸ್ ಅಂಡ್ ಮ್ಯಾಚ್ ಮಾಡಿಕೊಳ್ಳಲೂ ಸೂಕ್ತ. ■

## ದುಪ್ಪಟ್ಟು ಅಂದಕ್ಕೆ ದುಪಟ್ಟಾ

ಚುನ್ರಿ, ಓಡ್ನಿ, ಚುನ್ನಿ, ವೇಲ್, ಶಾಲ್... ಹೀಗೆ ಬೇರೆ ಬೇರೆ ಹೆಸರುಗಳಿಂದ ಕರೆಯಲ್ಪಡುವ ದುಪಟ್ಟಾ ಚೂಡಿದಾರ್ ಮೇಲೆ ಧರಿಸುವ ಒಂದು ಉಡುಪು. ಮಹಿಳೆಯರ ಭುಜದ ಮೇಲೆ ತೂಗಾಡುವ ವಸ್ತ್ರವಿದು. ಮಹಿಳೆಯರನ್ನು ಉಳಿದವರಿಗಿಂತ ಭಿನ್ನವಾಗಿ ಪ್ರದರ್ಶಿಸುವ ವಸ್ತ್ರಧಾರಣ ದುಪಟ್ಟಾ. ಇದು ದೇಶದ ವಿವಿಧ ಪ್ರಾಂತ್ಯಗಳಲ್ಲಿ ಬೇರೆ ಬೇರೆ ರೀತಿಯ ವಿನ್ಯಾಸ ಹಾಗೂ ಶೈಲಿಯಲ್ಲಿ ಕಾಣಸಿಗುತ್ತದೆ. ಗುಜರಾತ್‌ನಲ್ಲಿ ಚುವಾರಿ, ರಾಜಸ್ಥಾನದಲ್ಲಿ ಲೆಹಾರಿಯಾ, ಹಿಮಾಚಲ ಪ್ರದೇಶದಲ್ಲಿ ಥಾತು, ಅಸ್ಸಾಂನಲ್ಲಿ ಸಾಮೇರ್, ಹೈದ್ರಾಬಾದ್‌ನಲ್ಲಿ ಖಡ, ಕರ್ನಾಟಕದಲ್ಲಿ ದುಪಟ್ಟಾ ಎಂದು ಇದನ್ನು ಕರೆಯಲಾಗುತ್ತದೆ. ಪ್ರತಿ ಪ್ರಾಂತ್ಯದಲ್ಲೂ ತನ್ನದೇ ಆದ ವಿಶೇಷತೆ ಹೊಂದಿದೆ. ನೋಡಲು ಬಹಳ ಆಕರ್ಷಣೀಯವಾಗಿ ಇರುತ್ತದೆ. ವಿವಿಧ ಪ್ರದೇಶಕ್ಕನುಗುಣವಾಗಿ ಒಂದೊಂದು ರೀತಿ ಹಾಗೂ ರೂಪದಲ್ಲಿ ದುಪಟ್ಟಾ ಕಾಣಸಿಗುತ್ತದೆ. ರಾಜಸ್ಥಾನ ಪ್ರಾಂತ್ಯದಲ್ಲಿ ಇವುಗಳನ್ನು ರಜಪೂತರ ಸಂಪ್ರದಾಯದಲ್ಲಿ ತಯಾರಿಸುತ್ತಾರೆ. ದಕ್ಷಿಣ ಭಾರತದಲ್ಲಿ ಹೂವಿನ ಪ್ರಿಂಟೆಡ್, ಟೈಡಲ್ ಸ್ಯಾರಿ ಇಲ್ಲವೇ ಬಂಗಾರದ ಜರಿ ಎಳೆಗಳಿಂದ ತಯಾರಿಸುತ್ತಾರೆ. ಪಂಜಾಬ್‌ನಲ್ಲಿ ಚುನ್ನಿಚರಾನಾ ಒಂದು ಬಹಳ ಪ್ರಸಿದ್ಧವಾದ ವಸ್ತ್ರ. ವಿವಾಹ ಸಂದರ್ಭದಲ್ಲಿ ಇದರ ಪ್ರಾಮುಖ್ಯತೆ ಹೆಚ್ಚು.

ಬಹುತೇಕ ಮಹಿಳೆಯರು ಇಷ್ಟಪಡುವ ಡಿಸೈನ್ ಬಾಂಧಿನಿ. ಇದೊಂದು ಗಂಟು ಹಾಕುತ್ತಾ ಮಾಡುವ ಒಂದು ಕಲೆ. ಮರುಭೂಮಿ ಪ್ರದೇಶದಲ್ಲಿ ಬಳಸುತ್ತಿದ್ದ ದುಪಟ್ಟಾ ಇಂದು ಎಲ್ಲಡೆಯೂ ಬಳಸಲು ಆರಂಭಿಸಿದ್ದಾರೆ. ಎಂಬ್ರಾಯಿಡರಿ ವರ್ಕ್, ಹೂವು, ಅಪ್ಲಿಕ್ ವರ್ಕ್ಸ್, ವಿಧ ವಿಧ ಹರಳುಗಳಿಂದ ಕೂಡಿದ ಕುಸುರಿ ಕೆಲಸ ಇತ್ಯಾದಿ ವಿನ್ಯಾಸಗಳಲ್ಲಿ ದುಪಟ್ಟಾ ಸಿಗುತ್ತದೆ.

ಮೊದಮೊದಲು ಇದನ್ನು ತಲೆಯ ಮೇಲೆ ಹೊದ್ದುಕೊಳ್ಳಲು ಬಳಸುತ್ತಿದ್ದರು. ಕಾಲಕ್ರಮೇಣ ಇದರ ಬಳಕೆ ವಿಸ್ತೃತವಾಗುತ್ತಾ ಸಾಗಿತು. ಇಂದಿನ ಫ್ಯಾಷನ್ ಯುಗದಲ್ಲಿ ಇದನ್ನು ಭುಜಗಳ ಮೇಲೆ ಸ್ಟೈಲಾಗಿ ಹಾಕಲು ಬಳಸುತ್ತಾರೆ. ಇದನ್ನು ಯುವತಿಯರು ಹಾಗೂ ಮಹಿಳೆಯರು ಅವರವರ ವೈಯಕ್ತಿಕ ಅಭಿರುಚಿಗಳಿಗೆ ಅನುಗುಣವಾಗಿ ಬಳಸಬಹುದು.

■ ಶಿವಲೀಲಾ ಸೊಪ್ಪಿಮಠ